# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
# ಕೆಂಗೇರಿ ಉಪ ವಿಭಾಗ, ವಾರ್ಡ್ ನಂ.198, ಹೆಮ್ಮಿಗೆಪುರ
# ವಾರ್ಡ್ ಸಮಿತಿ ಸಭೆ ದಿನಾಂಕ: 21/08/2021ರ
# ಸಭಾ ನಡವಳಿ

ದಿನಾಂಕ: 21/08/2021 ರಂದು ಬೆಳಿಗ್ಗೆ 11.00 ಗಂಟೆಗೆ ವಾರ್ಡ್ ನಂ.198, ಹೆಮ್ಮಿಗೆಪುರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯನ್ನು Zoom Meeting ಆ್ಯಪ್‌ನ ಮೂಲಕ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಪಟ್ಟಣಗೆರೆ, ಬಿ.ಬಿ.ಎಂ.ಪಿ. ಸಮುದಾಯಭವನ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿಯ ಸಭೆಯ ನಡವಳಿಗಳು

ಹಾಜರಿದ್ದವರು:

| ಕ್ರ ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳಿ | ಹುದ್ದೆ |
|---|---|---|
| 1 | ಶ್ರೀ ಶಿವಕುಮಾರ್ | ನೋಡಲ್ ಅಧಿಕಾರಿ, ವಾರ್ಡ್ ನಂ.198(ಹೆಮ್ಮಿಗೆಪುರ) ಹಾಗೂ ಕಾರ್ಯಪಾಲಕ ಅಭಿಯಂತರರು, ಉಪ ನಿರ್ದೇಶಕರ ಕಛೇರಿ ಕಟ್ಟಡ ಪರವಾನಗೆ ಕೋಶ-ಉತ್ತರ |
| 2 | ಶ್ರೀ ದಯಾನಂದ.ಎನ್ | ಸಹಾಯಕ ಅಭಿಯಂತರರು, ವಾರ್ಡ್-198, ಹೆಮ್ಮಿಗೆಪುರ |
| 3 | ಶ್ರೀ ರವಿಚಂದ್ರಚಾರಿ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.198, ಹೆಮ್ಮಿಗೆಪುರ |
| 4 | ಶ್ರೀಮತಿ ಮೋನಿಕ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.198, ಹೆಮ್ಮಿಗೆಪುರ |

ಶ್ರೀ ದಯಾನಂದ.ಎನ್, ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಆನ್‌ಲೈನ್ ಸಭೆಗೆ ಹಾಜರಾಗಿದ್ದ ಅಧಿಕಾರಿಗಳನ್ನು ಹಾಗೂ Zoom



Scanned with CamScanner

Meeting ನಲ್ಲಿ ಭಾಗವಹಿಸಿದ್ದ ಎಲ್ಲರನ್ನೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ಹಿಂದಿನ ಸಭಾ ನಡವಳಿಯನ್ನು ಓದಿ ರೆಕಾರ್ಡ್ ಮಾಡಲಾಯಿತು ಮತ್ತು ತೆಗೆದುಕೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

- **<u>ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-</u>** ಅಧ್ಯಕ್ಷರು, ಕೋವಿಡ್-19ರ ಸಾಂಕ್ರಾಮಿಕ ರೋಗದ ಬಗ್ಗೆ ಹಾಗೂ ಸರ್ಕಾರ ಮತ್ತು ಬಿ.ಬಿ.ಎಂ.ಪಿ. ವತಿಯಿಂದ ನೀಡುತ್ತಿರುವ ಸೌಲಭ್ಯ/ಸೌವಲತ್ತುಗಳು ಹಾಗೂ ಕೋವಿಡ್ ಪರಿವೀಕ್ಷಣೆಯಿಂದ ಮೊದಲುಗೊಂಡು ಆಸ್ಪತ್ರೆಗೆ ದಾಖಲಾಗುವವರೆಗೆ ಮತ್ತು ಕೋವಿಡ್-19 ಪರೀಕ್ಷೆಯ ಬಗ್ಗೆ ಸವಿಸ್ತಾರವಾಗಿ ಸಭೆಗೆ ವಿವರಿಸಿದರು. ಕೋವಿಡ್-19ರ ಪರೀಕ್ಷೆಯನ್ನು ಹೆಚ್ಚು ಮಾಡುವ ಬಗ್ಗೆ ಸಹಕರಿಸುವಂತೆ ಸಭೆಯಲ್ಲಿದ್ದ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷರುಗಳು ಮತ್ತು ಅಧಿಕಾರಿ ವರ್ಗದವರಿಗೆ ವಿನಂತಿಸಿ, ಆರೋಗ್ಯ ಪರಿವೀಕ್ಷಕರು ಮತ್ತು ಆರೋಗ್ಯಾಧಿಕಾರಿಗಳು ಸದರಿಯವರನ್ನು ಸಂಪರ್ಕಿಸಿ ಸಹಕಾರ ಪಡೆದುಕೊಳ್ಳಲು ಸೂಚಿಸಿದರು ಮತ್ತು ಮಾರ್ಷಲ್‌ಗಳನ್ನು ನಿಯೋಜಿಸಿ ಮಾಸ್ಕ್ ಧರಿಸದೇ ಇರುವವರಿಗೆ ದಂಡವನ್ನು ವಿಧಿಸಲು ಸೂಚಿಸಲಾಯಿತು ಹಾಗೂ ಕೋವಿಡಡ್-19 ವ್ಯಾಕ್ಸಿನ್ ಲಸಿಕೆಗಳನ್ನು ನೀಡುತ್ತಿರುವ ಸ್ಥಳ ವಿವರಗಳನ್ನು ಸಭೆಗೆ ತಿಳಿಸಲಾಯಿತು. ಇದರ ಸದುಪಯೋಗ ಪಡೆಯಲು Zoom Meeting ನಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಕೋರಲಾಯಿತು.

- **<u>ಬೆಂಗಳೂರು ವಿದ್ಯುತ್ ಸರಬರಾಜು ನಿಗಮ:-</u>** ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ವಿಜಯಶ್ರೀ ಬಡಾವಣೆಯಲ್ಲಿ ವಿದ್ಯುತ್ ವೋಲ್ಟೇಜ್ ವ್ಯತ್ಯಯದಿಂದಾಗಿ ಗೃಹೋಪಯೋಗಿ ವಿದ್ಯುತ್ ಉಪಕರಣಗಳು ಹಾಳಾಗುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು. ಈ ಸಂಬಂಧ ಬೆಸ್ಕಾಂ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಲಾಯಿತು.

- **<u>ಅರಣ್ಯ ವಿಭಾಗ, ಬಿಬಿಎಂಪಿ:-</u>** ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ವಿಜಯಶ್ರೀ ಬಡಾವಣೆಯಲ್ಲಿ ಮರದ ಕೊಂಬೆಗಳು ಬೃಹತ್ ಆಕಾರದಲ್ಲಿ ಬೆಳೆದು ವಿದ್ಯುತ್ ಬೀದಿ ದೀಪಗಳ ಬೆಳಕು ರಸ್ತೆಯ ಮೇಲೆ ಬೀಳದೆ ರಾತ್ರಿ ಸಮಯದಲ್ಲಿ ಕತ್ತಲು ಆವರಿಸಿರುವ ಬಗ್ಗೆ ಸಭೆಗೆ ತಿಳಿಸಲಾಯಿತು. ಈ ಸಂಬಂಧ ಅರಣ್ಯ ವಿಭಾಗದ ಅಧಿಕಾರಿಗಳ ಗಮನಕ್ಕೆ ತರಲಾಗುವುದೆಂದು ಸಭೆಗೆ ತಿಳಿಸಲಾಯಿತು.

- **<u>ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ</u>** :- 1) ವಾರ್ಡ್ ನಂ.198ರಲ್ಲಿ ಬಾಲಾಜಿ ಬಡಾವಣೆಯಲ್ಲಿ ಪಿಳ್ಳೇಪಕಮ್ಮ ದೇವಸ್ಥಾನದ ಹಿಂಭಾಗದ ಚರಂಡಿಯಲ್ಲಿ ತುಂಬಿರುವ ಹೂಳನ್ನು



Scanned with CamScanner

ತೆಗೆಯಲು ಸಭೆಯ ಗಮನಕ್ಕೆ ತರಲಾಯಿತು. ಈ ಸಂಬಂಧ ನೋಡಲ್ ಅಧಿಕಾರಿಯವರು ವಾರ್ಡ್‌ನ ಸಹಾಯಕ ಇಂಜಿನಿಯರ್‌ವರಿಗೆ ಸಮಸ್ಯೆಯನ್ನು ಶೀಘ್ರವಾಗಿ ಬಗೆಹರಿಸಲು ಸೂಚಿಸಿದರು. ಸಹಾಯಕ ಅಭಿಯಂತರರು ಮಾತನಾಡಿ ಸಿಲ್ಟ್ & ಟ್ರ್ಯಾಕ್ಟರ್ ಕಾಮಗಾರಿಯ ಕಾರ್ಯಾದೇಶವನ್ನು ನೀಡಿರುವುದಿಲ್ಲವೆಂದು ತಿಳಿಸಿದರು.

2)ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ಬಾಲಾಜಿ ಬಡಾವಣೆಯಲ್ಲಿ 110 ಹಳ್ಳಿಗಳ ಕಾಮಗಾರಿಯಿಂದಾಗಿ ಹಾಳಾಗಿರುವ ರಸ್ತೆಯನ್ನು ದುರಸ್ಥಿಗೊಳಿಸಲು ಸಭೆಯ ಗಮನಕ್ಕೆ ತರಲಾಯಿತು. ಸಹಾಯಕ ಅಭಿಯಂತರರು ಮಾತನಾಡಿ 110 ಹಳ್ಳಿಗಳ ರಸ್ತೆಗಳನ್ನು ದುರಸ್ಥಿಪಸಿಸಲು ಅನುದಾನವು ನಿಗಧಿಯಾಗಿದ್ದು, ಸದರಿ ಅನುದಾನಕ್ಕೆ ಸಂಬಂಧಿಸಿದಂತೆ ಅಂದಾಜು ಪಟ್ಟಿಯನ್ನು ತಾಂತ್ರಿಕ ಸಮಾಲೋಚಕರನ್ನು ನೇಮಿಸಿಕೊಂಡು ಅಂತಿಮಗೊಳಿಸಲಾಗುತ್ತಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ರಸ್ತೆ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗುವುದೆಂದು ಸಭೆಗೆ ತಿಳಿಸಿದರು.

3)ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ವಿಜಯಶ್ರೀ ಬಡಾವಣೆಯಲ್ಲಿ ಬಾಕಿ ಇರುವ ರಸ್ತಗಳಿಗೆ ಡಾಂಬರೀಕರಣಗೊಳಿಸುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು. ಈ ಸಂಬಂಧ ನೋಡಲ್ ಅಧಿಕಾರಿಗಳು ಮಾತನಾಡಿ ಅನುದಾನ ಲಭ್ಯತೆಯ ಅನುಗುಣವಾಗಿ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

(ದಯಾನಂದ.ಎನ್)
ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್-198, ಹೆಮ್ಮಿಗೆಪುರ

(ಶಿವಕುಮಾರ್)
ನೋಡಲ್ ಅಧಿಕಾರಿ
ವಾರ್ಡ್ ಸಮಿತಿ
ವಾರ್ಡ್-198, ಹೆಮ್ಮಿಗೆಪುರ

ಪ್ರತಿಯನ್ನು:-

1) ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ ರವರ ಕಛೇರಿಗೆ ಸಲ್ಲಿಸಿದೆ.
2) ಕೌನ್ಸಿಲ್ ಕಾರ್ಯದರ್ಶಿ, ಬಿ.ಬಿ.ಎಂ.ಪಿ. ಕೇಂದ್ರ ಕಛೇರಿ ರವರ ಅವಗಾಹನೆಗೆ ಸಲ್ಲಿಸಿದೆ.
3) ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
4) ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
5) ಅಧೀಕ್ಷಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
6) ಕಾರ್ಯಪಾಲಕ ಅಭಿಯಂತರರು (ಕೆಂಗೇರಿ ವಿಭಾಗ) ರವರ ಅವಗಾಹನೆಗೆ ಸಲ್ಲಿಸಿದೆ.



Scanned with CamScanner

7) ಕಂದಾಯ ಅಧಿಕಾರಿಗಳು (ಕೆಂಗೇರಿ ವಲಯ) ರವರ ಮಾಹಿತಿಗಾಗಿ ಕಳುಹಿಸಿದೆ.

8) ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ, ರಾಜರಾಜೇಶ್ವರಿನಗರ ವಿಭಾಗ) ರವರ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ, ರಾಜರಾಜೇಶ್ವರಿನಗರ ಉಪವಿಭಾಗ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

10) ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ರಾಜರಾಜೇಶ್ವರಿನಗರ ವಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

11) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ಕೆಂಗೇರಿ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

12) ತೋಟಗಾರಿಕಾ ಅಧೀಕ್ಷಕರು, ರಾಜರಾಜೇಶ್ವರಿನಗರ ವಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

13) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ, ರಾಜರಾಜೇಶ್ವರಿನಗರ ಯೋಜನಾ (110 ಹಳ್ಳಿಗಳು) ಉಪವಿಭಾಗ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

14) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ಕೆಂಗೇರಿ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.ಪ

15) ತೋಟಗಾರಿಕಾ ಅಧೀಕ್ಷಕರು, ರಾಜರಾಜೇಶ್ವರಿನಗರ ವಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

16) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ, ರಾಜರಾಜೇಶ್ವರಿನಗರ ಯೋಜನಾ (110 ಹಳ್ಳಿಗಳು) ಉಪವಿಭಾಗ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.



Scanned with CamScanner